Regd No BG 155

— ಶ್ರೀ —

24—4—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ಮು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

Protect the cow

ಸಂಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬಂಕಯ್ಯರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ರೆಲೆ ದರ ಏರಿಕೆಯ ಬಗೆ
ಲಲು ಗ

ಪ್ರತಿಭಟನೆ

ಉಪಾಧ್ಯಾಯರ ಅಭಾವ

ಪ್ರಪಂಚದಲ್ಲಿ 5 ಮಕ್ಕಳಿಗೆ 2ನೆ ಶಿಕ್ಷಕ ಮಾತ್ರ ಒಂದಲ್ಲಒಂದು ವಿಧದ ಶಿಕ್ಷಣ ಪಡೆಯುತ್ತಿರುವರೆಂದು ಯೊನೆ ಸ್ಕೋ ವರದಿ ತಿಳಿಸುತ್ತದೆ. ಪ್ರಪಂಚದ ಅರ್ಧಂಶ ಉಪಾಧ್ಯಾಯರ ಅಭಾವವಿದೆ ಎಂದು ಆ ವರದಿ ತಿಳಿಸಿ, ಕೆಲವು ದೇಶಗಳಲ್ಲಿ ನೂರು ಅಥವಾ ಅದಕ್ಕೆ ಹೆಚ್ಚು ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರು ಇರುವರು ಎಂದು ಆ ವರದಿ ತಿಳಿಸುತ್ತದೆ.

ಸನ್ಯಾಸ ಸಮಾರಂಭ

ನಾಟ್ಯಕಲಾ ವಿಶಾರದ ಶ್ರೀ ಎಂ ಸಿ ಮಹದೇವಸ್ವಾಮಿಯವರಿಗೆ ಮೈಸೂರು ಪುಂಜನರ ಪರವಾಗಿ ನಿನ್ನೆ ಸಂಜೆ ಟೌನ್ ಹಾಲ್‌ನಲ್ಲಿ ಪುಂಜನರ ಪರವಾಗಿ ಸನ್ಯಾಸ ಸಮಾರಂಭ ಏರ್ಪಡಿಸಿತ್ತು. ಪ್ರದೇಶ ಕಾಂಗ್ರೆಸು ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಗೌರಮ್ಮ ನಾಗರಂತಾಜರಿಂದ ಪ್ರಾರ್ಥನೆ. ಶ್ರೀ ಡಿ ದೇವೇಂದ್ರಪ್ಪನವರಿ ಸಂಗೀತ ನಡೆಯಿತು.

ಕೃಷ್ಣಾಪುರದಲ್ಲಿ ರಥೋತ್ಸವ

ಚಿ ನರಸೀಪುರದ ತಾಲ್ಲೂ ಕೃಷ್ಣಾಪುರದ ಶ್ರೀ ಸಂತಾನಗೋಪಾಲಕೃಷ್ಣ ಸ್ವಾಮಿಯವರ ರಥೋತ್ಸವವು ಮೇ ತಿಂಗಳು 4 ನೇ ತಾರೀಖು ಶುಕ್ರವಾರ ನಡೆಯುವುದು. ಇದರ ಅಂಗವಾಗಿ ಇದೇ 27 ರಿಂದ ಮೇ 7 ರವರೆಗೆ ವಿವಿಧ ಕಾರ್ಯಕ್ರಮಗಳು ಏರ್ಪಾಟಾಗಿದೆ ಭಕ್ತಾದಿಗಳು ಯಥಾಶಕ್ತಿ ದವ್ಯಸಹಾಯ ಮಾಡುವಂತೆ ಕೋರಲಾಗಿದೆ

★

ಈದಿನ ಡೆಹ್ರಡೂನ್‌ಗೆ ಬಂದಿರುವ ಪಂ|| ನೆಹರು ಅಲ್ಲಿ 4 ದಿನ ವಿಶ್ರಾಂತಿ ಪಡೆಯುವರು

ವಿವಿಧ ವಿಷಯಗಳು

1962—63 ರ ಕೇಂದ್ರದ ಅಂದಾಜು ಬಟ್ಟೆ ಈ ರೀತಿ ಇದೆ — 132087ಕೋಟಿ ರೂಪಾಯಿಗಳು 60-80 ಕೋಟಿ ರೂಪಾಯಿಗಳು (ನಿವ್ವಳ) ಇದು ವರ ಮಾನ 138165 ಕೋಟಿ ರೂಗಳು ಸು 60-80 ಕೋಟಿ ರೂಪಾಯಿಗಳು ತೆರಿಗೆ ಸಲಹೆಗಳು ಇದು ವಿಚಿತ್ರ.

ಪೂರ್ಣ ವರ್ಷದ ಅವಧಿಗೆ ರೂ. 71-7 ಕೋಟಿ ರೂಪಾಯಿಗಳ ಹೊಸ ತೆರಿಗೆ ಸೂಚನೆಗಳನ್ನು ಭಾ ಶ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ನಿನ್ನೆ ಲೋಕಸಭೆಯಲ್ಲಿ ಮಂಡಿಸಿದರು. ವಿಧಿಸುವ ಅಬ್ಕಾರಿ ತೆರಿಗೆಯು ದೆಸೆಯಿಂದ ಒಟ್ಟಿನಲ್ಲಿ ಹೊಗೆಸೊಪ್ಪು, ಸಿಗರೇಟುಗಳ ಬೆಲೆ ಏರುವುದು. 5 ವರ್ಷಗಳ ಹಿಂದೆ ಶ್ರೀ ಟಿ ಟಿ. ಕೃಷ್ಣಮಾಚಾರಿಯವರು ತಂದಿದ್ದ ವೆಚ್ಚದ ತೆರಿಗೆ ರದ್ದಾಗುವುದು.

ಭಾರತ ಸರ್ಕಾರದ ಆರ್ಥಿಕ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ಲೋಕಸಭೆಯಲ್ಲಿ ನಿನ್ನೆ ಹೇಳಿಕೆಯನ್ನಿತ್ತು ಈಗ ಕೇಂದ್ರ ಸರ್ಕಾರದ ನೌಕರರಿಗೆ ಹೆಚ್ಚಿಸಿರುವ ತಟ್ಟೆಭತ್ಯ ಹೆಚ್ಚು ಔದಾರ್ಯದಿಂದ ಕೂಡಿದೆ ಎಂದರು ಹೆಚ್ಚುತ್ತಿರುವ ಜೀವನವೆಚ್ಚವನ್ನು ಸರಿದೂಗಿಸಲು ಬೇರೆ ರೀತಿ ಆರ್ಥಿಕ ನೆರವನ್ನು ಕೊಡುವದಿಲ್ಲ ಎಂದು ಮಂತ್ರಿಯವರು ನುಡಿದರು

ಬೆಂಗಳೂರು ನಗರದ ಜನರಿಗೆ ಉತ್ತಮವಾದ ಸಂಚಾರ ವ್ಯವಸ್ಥೆಯನ್ನು ಜಾರಿಗೆ ತರಲು ಹಾಗೂ ಕಾರ್ ರೆಂಟಿನ ಸಂಪತ್ತು ಹೆಚ್ಚಿಸಲು ಬಿ ಟಿ ಎಸ್ ವ್ಯವಸ್ಥೆಯನ್ನು ಕಾರ್ಪೊರೇಷನ್ ವಹಿಸಿಕೊಳ್ಳಬೇಕೆಂಬ ನಿರ್ಣಯವು ನಿನ್ನೆ ನಡೆದ ಬೆಗಳೂರು ಕಾರ್ಪೊರೇಷನ್ ಸಭೆಯಲ್ಲಿ ಅಂಗೀಕೃತವಾಯಿತು.

ರೂ 200 ರಿಂದ 500 ರೂ ವೇತನದವರು ಆದಾಯ ವ್ಯಾಪ್ತಿ ತೆರಿಗೆ ವಿಧಿಸಕೂಡದೆಂದು ಬೆಂಗಳೂರು ಕಾರ್ಪೊರೇಷನ್ ನಿರ್ಧರಿಸಿದೆ.

ಲೋಕಸಭೆಯ ಉಪ-ಸ್ಪೀಕರಾಗಿ ಶ್ರೀ ಎಸ್ ವಿ ಕೃಷ್ಣಮೂರ್ತಿರಾವ್ ನಿನ್ನೆ ಆಯ್ಕೆ ಆದರು.

ರೈಲಿನಿಂದ ಎಸೆತ

ಅಂಬಾಲಾ - ಡೆಲ್ಲಿ ಪ್ಯಾಸೆಂಜರ್ ರೈಲು ಭಾನುವಾರ ಮಧ್ಯಾಹ್ನ ಘಾಜಿಪುರ ಬಿಟ್ಟೊಡನೆ, 35 ವರ್ಷದ ಮಹಿಳೆ ಮತ್ತು ಆಕೆಯ 9 ವರ್ಷದ ಮಗ ಮಾತ್ರ ಇದ್ದ ವಿಭಾಗಕ್ಕೆ ಒರ್ವನು ಪ್ರವೇಶಿಸಿ ಮಹಿಳೆಯ ಓಲೆಯನ್ನು ತೆಗೆಯಲು ಪ್ರಯತ್ನಿಸಿದನೆಂದು ಹೇಳಲಾಗಿದೆ. ಅವನ ಪ್ರಯತ್ನವನ್ನು ವಿರೋಧಿಸಿದ್ದರಿಂದ, ಆಕೆಯ ಮಗನೊಂದಿಗೆ ಆಕೆಯನ್ನು ಹೊರಗೆ ಎಸೆದನು. ಇತರ ಗಾಡಿಗಳಲ್ಲಿ ಇದ್ದ ಜನರು ಇದನ್ನು ನೋಡಿ ಅಲಾರಂ ಸರಪಳಿ ಎಳೆದು ರೈಲನ್ನು ನಿಲ್ಲಿಸಿದರು ಎಸೆಯಲ್ಪಟ್ಟವರಿಗೆ ಪ್ರಥಮ ಚಿಕಿತ್ಸೆ ದೊರೆಯಿತು. ಈ ವಿಚಾರವನ್ನು ದೆಹಲಿ ಪೋಲೀಸರಿಗೆ ತಿಳಿಸಿದರೂ, ಗಡಿ ಆಧಾರದ ಮೇಲೆ ಗಾಜಿಪುರ ಪೋಲೀಸರು ತನಿಖೆ ಮಾಡುತ್ತಿರುವರು.

೦೦೦

ಲೋಕಸಭೆಯಲ್ಲಿ ನಿನ್ನೆ ಉಪ ಅರ್ಥ ಮಂತ್ರಿ ಶ್ರೀಮತಿ ತಾರಕೇಶ್ವರೀ ಸಿಂಹರವರು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತಾ, ಆದಾಯ ತೆರಿಗೆಯ ಇಲಾಖೆ ಕೈಗೊಂಡಿರುವ ಪ್ರಯೋಂಧಕಗಳಿಂದ ವರ್ಷಾನ ತೆರಿಗೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಕಡಿಮೆ ಆಗಿದೆ ಎಂದರು.

ಯುದ್ಧ ಕವಾದಲ್ಲಿ ಹೊಸ ಹೊಸ ಅಭಿವೃದ್ಧಿಯನ್ನು ಹೊಂದಬೇಕೆ ದಾವಾ ಕಿಷ್ಕಾನ ಸೇನಾಧಿಕಾರಿಗಳಿಗೆ ಅಧ್ಯಕ್ಷ ಆಯೂಬ್ ಕರೆ ಇತ್ತಿರುವರು

ಕೈಚೀಲವನ್ನು ತೆಗೆದುಕೊಂಡುಹೋಗದಂತೆ ತಿರುಗಿಕೊಂಡು ಹೊಸಬಗೆಯಾದ ಪಣ್ಣ ಟೆಲಿವಿಷನ್ ಸೆಟ್‌ನ ಟೋಕಿಯೋದಲ್ಲಿ ಪ್ರದರ್ಶಿಸಿದೆ

ನಾಳೆಯ ಪಂಚಾಂಗ

ಅನಂತ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಭಾಮಣಿ
ಪಂಪಶ್ರೀಕೃಷ್ಣ ಜೋಯಿಸರಿಂದ
2 ಪಂಚಾಂಗ ಸ್ವೀಕಾರ

ವಾರ್ತಾ ವಿಶೇಷಗಳು

ಮೈಸೂರು ಪೌರಸಭೆಯ ಸಾಧಾರಣ ಮೀಟಿಂಗು ತಾ || 30 ಸಂಜೆ 4 ಗಂಟೆಗೆ ನಡೆಯುತ್ತದೆ.

ನೇತ್ರಡಾಕ್ಟರ ಪದ್ಮಶ್ರೀ ಡಾ || ವೋದಿಯವರು ಮುಡಕೇರಿಯಲ್ಲಿ ತಾ || 30 ರಂದು ಫ್ರೀ ಐ ಆಪರೇಷನ್ ಕ್ಯಾಂಪು ನಡೆಸುವರು.

ಹಣ್ಣು ರಕ್ಷಣೆ ಮಾಡುವ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಭಾರತ ಸರ್ಕಾರ 9 ಪ್ರಾದೇಶಿಕ ಸಂಶೋಧನಾ ಸಮಿತಿಗಳನ್ನು ಸ್ಥಾಪಿಸುವದು

ನವದೆಹಲಿ ವಾರ್ತೆಯಂತೆ, ಹೆಚ್ಚುವ- ರೈಲ್ವೇ ದಂವು ವರ್ಷದಲ್ಲಿ ಪ್ರಯಾಣ ಮಾಡುವ ಸುಮಾರು 100 ಕೋಟಿ 3 ನೇ ತರಗತಿಯ ಪ್ರಯಾಣೀಕರಿಗೆ 13 ಕೋಟಿ ರೂಗಳನ್ನು ಕೊಡಬೇಕಾಗುವುದು

ಬೀಡಿಗಳು ಮತ್ತು ಸಿಗರೇಟುಗಳನ್ನು ಹೆಚ್ಚಾಗಿ ಸೇದುವುದರಿಂದ ಬಾಯಿ, ಗಂಟಲು ಮತ್ತು ಶ್ವಾಸಕೋಶಗಳಿಗೆ ಕ್ಯಾನ್ಸರು ರೋಗ ತಗಲುವ ಸಂಭವವಿರುವುದೆಂದು ಭಾರತದಲ್ಲಿ ನಡೆಸಿರುವ ವಿಚಾರಣೆಗಳಿಂದ ತಿಳಿದುಬಂದಿರುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು

ಪೋರ್ಚುಗೀಸು ಸ್ವಾಧೀನದಲ್ಲಿರುವ ಸ್ವದೇಶಕ್ಕೆ ವಾಪಸಾಗುವ ಮೊದಲು ಶವ್ ಪಾಸಗಿ ಹಾಗೂ ಸರ್ಕಾರಿ ಸಾಲವನ್ನು ತೀರಿಸಬೇಕೆಂದು ಆಜ್ಞೆ ಮಾಡಿರುವದಾಗಿ ಪಂಜಿಂ ವಾರ್ತೆ. ಅವರು ಬಳಿ ಹಣವಿಲ್ಲದಿದ್ದರೆ ಈ ಉದ್ದೇಶಕ್ಕಾಗಿ ಗೋವಾದಲ್ಲಿರುವ ಅವರ ಸ್ವತ್ತುಗಳನ್ನು ಅಟ್ಯಾಚಮಾಡಿ ಮಾರಾಟ ಮಾಡುವದಾಗಿ ತಿಳಿಸಿದ್ದಾರೆ

ಗಂಟೆಗೆ 1 ಲಕ್ಷ ಮೈಲಿಗಳಂತೆ ಬಾಹ್ಯಾಕಾಶ ನೌಕಾಗಳನ್ನು ತಳ್ಳುವ ವಿಧಾನವನ್ನು ವಿಜ್ಞಾನಿಗಳು ಕಂಡುಹಿಡಿಯಲು ಪ್ರಯತ್ನಿಸುತ್ತಿರುವರೆಂದು ಹೇಳಲಾಗಿದೆ — ಚಂದ್ರ 2400000 ಮೈಲಿಗಳ ದೂರದಲ್ಲಿದೆ : ಶುಕ್ರ 25 ಎ. ಲಿ ಯು ಮೈಲಿ ದೂರ ; ಕುಜ 50 ಎ.ಲಿಯು ಮೈಲಿ ದೂರ ; ಸೆಪ್ಟೂ 3 ಬಿಲಿಯ್ಸ್ ಹತ್ತಿರ ದೂರ ; ಪ್ಲೂಟೋ 3 ಬಿಲಿಯ್ಸ್ ಮೈಲಿಗಿಂತ ಹೆಚ್ಚು ದೂರವಿದೆ.

SHAKTI SUDHA

A Superb Tonic

ಗೋರಕ್ಷಣ ಪತ್ರಿಕೆಯ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪತ್ರಿಕೆಯು, ಪಶುವೈದ್ಯ, ಶಾಕಾಹಾರ ವಿಚಾರಗಳಿಂದ ಕೂಡಿದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ ವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವುಡ್‌ಲ್ಯಾಂಡ್ಸ್ ಪ್ರಶಂಸನೀಯ 11 ನೇ ವಾರ

ಒಂದು ಲಕ್ಷಕ್ಕೂ ಹೆಚ್ಚು ಮಂದಿ ನೋಡಿ ಆನಂದಿಸುವ ಅತ ನೋಪಲ್ ಚಿತ್ರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆನ್

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— 20-4-62 ರಿಂದ

ಸಂಪೂರ್ಣ ರಾಮಾಯಣ

- ಕನ್ನಡ -

[ಪೂರ್ಣ ವರ್ಣರಂಜಿತ ಚಿತ್ರ] [ದಿನವಹಿ 3 ಆಟಗಳು]

Help The 'Gorakshana'



Reentry from Space — Astronaut John Glenn

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.